ಶ್ರೀ ಜಾಪುಗೌಡ ದರ್ಶನಪುರ.—೧೯೮೦ನೇ ಇಸವಿಯ ನಂತರ ಗುಲ್ಬರ್ಗಾದಲ್ಲಿ ಆಫಜಲ್‌ಪುರ ಯಾದಗಿರ್‌ನಲ್ಲಿ ವಿಶೇಷವಾಗಿ ಮಳೆಯಾಗಿದ್ದರಿಂದ ಶಹಪುರದಲ್ಲಿ ಇರತಕ್ಕಂಥ ಸುಮಾರು ೮ ಟ್ಯಾಂಕ್‌ಗಳು ಕೆರೆಗಳು ಒಡೆದು ಸುಮಾರು ೧೩ ಲಕ್ಷ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟಾಗಿರುವ ಬಗ್ಗೆ ಹೇಳಿರುತ್ತಾರೆ, ಇಲ್ಲಿ ಪೆಚ್ಚಿನ ಪ್ರಮಾಣದಲ್ಲಿ ಕುರುಬರೇ ಇದ್ದಾರೆ. ೪೦೫ನೇ ಕಾಯಿದೆಯ ಪ್ರಕಾರ ೫ ಎಕರೆಯೊಳ್ಗೆ ಬೆಳೆಯನ್ನು ಬೆಳೆಯತಕ್ಕಂಥ ಬೆಳೆಗಾರರಿಗೆ ನಷ್ಟ ಉಂಟಾದರೆ ಪರಿಹಾರ ಕೊಡಲಿಕ್ಕೆ ಬರುವುದಿಲ್ಲ. ಆದ್ದರಿಂದ ಸ್ಪೆಷಲ್ ಆಗಿ ಲೆಟರನ್ನು ಬರೆದು ಕಾಯಿದೆಯನ್ನು ಉಲ್ಲಂಘನೆ ಮಾಡಿಯಾದರೂ ಬಡವರಿಗೆ ಆದರಲ್ಲೂ ವಿಶೇಷವಾಗಿ ಕುರುಬರೇ ಇರತಕ್ಕಂಥ ಈ ಪ್ರದೇಶಕ್ಕೆ ಚಂಚನಾಮೆದಾಡಿ ಕೊಡಿ ಈ ಕ್ಷೇತ್ರಕ್ಕೆ ರೆವಿನ್ಯೂ ಅಧಿಕಾರಿಗಳನ್ನು ಕಳುಹಿಸಿಕೊಟ್ಟಿದ್ದರೂ ಕೂಡ ಇಲ್ಲಿಯವರೆಗೆ ರೆವಿನ್ಯೂ ಡಿವಾರ್ಟ್‌ಮೆಂಟ್‌ನಿಂದ ಉತ್ತರ ಬಂದಿಲ್ಲ.

(ಗೊಂದಲ)

ಶ್ರೀ ಹನುಮಂತರಾವ್ ದೇಸಾಯ್.—ಮಾನ್ಯ ಅಧ್ಯಕ್ಷರೇ, ಭೀಮಾನದಿ ದಂಡೆಮೇಲೆ ಆಫಜಲ್‌ಪುರಕ್ಕೆ ಸೇರಿದ ಸುಮಾರು ೩೦ ಹಳ್ಳಿಗಳು ಬರುತ್ತವೆ. ೩೦ ಹಳ್ಳಿಗಳಲ್ಲೂ ಕಾರ್ಫ್‌ಗೆ ಸಂಪೂರ್ಣವಾಗಿ ನಷ್ಟವಾಗಿದೆ. ಅಲ್ಲದೆ ಅನೇಕ ಮನೆಗಳು ಕೂಡ ನೆಲಸಮ ಪ್ರವಾಹದಿಂದ ನಷ್ಟಕ್ಕೆ ಒಳಗಾಗಿವೆ. ಸರ್ಕಾರದ ರಿಪ್ರೆಸೆಂಟೇಟಿವ್‌ನ್ನು ಕೊಟ್ಟಿರತಕ್ಕಂಥದ್ದು ಸರಿಯಾಗಿಲ್ಲ. ಅಲ್ಲಿಗೆ ನಾವು ಹೋಗಿ ಬಂದಿದ್ದೇವೆ. ಸುಮಾರು ೧೫ ಲಕ್ಷ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ. ಆದ್ದರಿಂದ ಈಗ ೫೦ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಾಗಿ ಮಾನ್ಯ ಮಂತ್ರಿಗಳು ಹೇಳಿದಾರೆ. ಸುಮಾರು ೧೦ ಲಕ್ಷ ರೂಪಾಯಿಗಳನ್ನಾದರೂ ಕೊಡಲು ತೀವ್ರ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ. ಶರಣಪ್ಪ.—ನನ್ನ ಕ್ಷೇತ್ರದಲ್ಲಿ ಬರುವಂತಹ ಸುಮಾರು ೩೦ ಹಳ್ಳಿಗಳ ರೈತರಿಗೆ ಇದರಿಂದ ತೊಂದರೆಯಾಗಿದೆ. ಜಮೀನಿನಲ್ಲಿ ನೀರು ತುಂಬಿಕೊಂಡ ಕಾರಣದಿಂದ ರೈತರು ಬೆಳೆದ ತೊಗರಿ ಮತ್ತು ಶೇಂಗ ಬೆಳೆ ಕೊಚ್ಚಿಕೊಂಡು ಹೋಗಿದೆ. ರೈತರು ಈಗಾಗಲೇ ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ಸಹ ಸ್ಥಳ ಪರಿಶೀಲನೆ ಮಾಡಿ ವಿವರವಾದ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಆದರಿಂದ ರೈತರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್,—ಅಲ್ಲಿನ ಸ್ಥಿತಿಯನ್ನು ಎಲ್ಲಾ ಮಾನ್ಯ ಸದಸ್ಯರೂ ಸಹ ಹೇಳಿದ್ದಾರೆ, ಪರಿಸ್ಥಿತಿ ಬಹಳ ಹದಗೆಟ್ಟಿದೆ. ರೈತರಿಗೆ ಬಹಳ ತೊಂದರೆಯಾಗಿದೆ. ಬದು ಏಕರೆಯವರಿಗೆ ಮಾತ್ರ ಪರಿಹಾರ ಕೊಟ್ಟಿರೆ ಬೇರೆಯವರಿಗೆ ತೊಂದರೆಯಾಗುತ್ತದೆ. ಆದರಿಂದ ನಷ್ಟಕ್ಕೆ ಒಳಗಾದ ಎಲ್ಲರಿಗೂ ಪರಿಹಾರ ಒದಗಿಸಲು ವ್ಯವಸ್ಥೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ತಾವು ಟೆಲಿಗ್ರಾಂ ಕಳುಹಿಸಿ ಕೊಡಬೇಕು.

ಶ್ರೀ ಎ. ಎಲ್. ಪಾಟೀಲ್.—ಈ ಗಮನ ಸೆಳೆಯುವ ಸೂಚನೆಗೆ ಉತ್ತರ ತಯಾರು ಮಾಡಿದ ನಂತರವೂ ಸಹ ಅಲ್ಲಿ ಮೇಲಿಂದ ಮೇಲೆ ಮಳೆಯಾಗಿದೆ. ಅನೇಕ ಕೆರೆಗಳು ಒಡೆದು ಹೋಗಿವೆ. ಇದರ ಜೊತೆಗೆ ಮಹಾರಾಷ್ಟ್ರದವರು ಭೀಮಾನದಿಯಲ್ಲಿ ನೀರನ್ನು ಬಿಟ್ಟಿರುವುದರಿಂದ ಫ್ಲಡ್ ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಈ ಕಡೆಯ ಮಂತ್ರಿ ಆ ಕಡೆಯ ನನ್ನ ಸ್ನೇಹಿತರು ಕೊಟ್ಟಂತಹ ಅಭಿಪ್ರಾಯ ಗಳಿಗೆ ಸಂಬಂಧಪಟ್ಟಂತೆ ವಿವರಗಳನ್ನು ತರಿಸಿಕೊಂಡು ನಾವು ಶಕ್ಯವಿದ್ದಷ್ಟು ಸಹಾಯ ಮಾಡುತ್ತೇವೆಂದು ಹೇಳುತ್ತೇನೆ.

(ii) re : Distubance caused on 31st August, 1983 at the time of inauguration of Gowdown and General Body meeting of Aldur Agricultural Co-operative Society in Chikka Magalure Dt.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲಾ ಆಲುದೂರು ವ್ಯವಸಾಯ ಸೇವಾ ಸಹಕಾರ ಸಂಘ, ನಿಯಮಿತ ಜನರಲ್ ಬಾಡಿ ಮೀಟಿಂಗ್ ಮತ್ತು ಗೋಡೌನ್ ಪ್ರಾರಂಭೋತ್ಸವ ದಿನಾಂಕ ೩೧-೮-೮೩ರಲ್ಲಿ ರಂದು ನಡೆದ ಸಂದರ್ಭದಲ್ಲಿ ರೈತ ಸಂಘದ ಸೋಗಿನಲ್ಲಿ

ಕೆಲವು ಜನ ಗೋಡಾನಿನ ಬೀಗ ಮುಂದು ಸುಗ್ಗಿ ಶಿಲಾ ಫಲಕಗಳನ್ನು ಒಡೆದ ನುಚ್ಚುನೂರು ಮಾಡಿ ಶಿಲಾಕಲ್ಲುಗಳನ್ನು ಒಡೆದ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ –

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).– ಮಾನ್ಯ ಅಧ್ಯಕ್ಷರೇ, ತಾರೀಖು ೩೧–೮–೮೩ ಬುಧವಾರ ರಂದು ಮಧ್ಯಾಹ್ನ ೩ ಗಂಟೆಗೆ ಜಿಲ್ಲೆಯ ಸಹಕಾರ ಸಂಘಗಳ ಉಪನಿಭಂದಕರವರಿಂದ ಅಲೂರು ವ್ಯವಸಾಯ ಸೇವಾ ಸಹಕಾರ ಸಂಘದ ನೂತನ ಉಗ್ರಾಣದ ಉದ್ಘಾಟನ ಸಮಾರಂಭವಿತ್ತು. ಆ ದಿವಸ ತಾಲ್ಲೂಕಿನ ರೈತ ಮುಖಂಡರು ಮತ್ತು ರೈತ ಸಂಘದವರು ಸುಮಾರು ೧೫೦–೨೦೦ ಜನ ಸೇರಿ ಸದರೀ ಸಮಾರಂಭಕ್ಕೆ ಆಡ್ಡಿ ಪಡಿಸಿ ಗಲಾಟೆ ಮಾಡಿದರು. ಆದರೂ ಪೋಲೀಸ್ ಬಂದೋಬಸ್ತಿನಿಂದ ಸಮಾರಂಭ ನಡೆಯಿತು. ೩೧–೮–೮೩ ರಂದು ಸಂಘದ ಸರ್ವ ಸದಸ್ಯರ ಸಭೆಯು ಮಧ್ಯಾಹ್ನ ೩ ಗಂಟೆಗೆ ಜರುಗಿದ ಸರ್ವ ಸದಸ್ಯರ ಸಭೆಯಲ್ಲಿ ಯಾವ ತರಹ ದೊಂಬಿ ಗಲಾಟೆ ನಡೆಯಲಿಲ್ಲ.

ತಾರೀಖು ೨೯–೮–೮೩ರಂದು ೧೨–೩೦ ಗಂಟೆಯ ಸಮಯದಲ್ಲಿ ಉಗ್ರಾಣದಲ್ಲಿ ಶಂಕುಸ್ಥಾಪನೆಗೆ ಹಾಕಿದ್ದ ಅಮೃತ ಶಿಲೆಯ ಕಲ್ಲನ್ನು ಕಿತ್ತು ಸಂಘದ ಸಕ್ಕರೆ ಖಾಲಿ ಚೀಲದಲ್ಲಿ ಹಾಕಿಕೊಂಡು ಹೋಗಿರುತ್ತಾರೆ ಈ ಬಗ್ಗೆ ಸಂಘದ ಅಧ್ಯಕ್ಷರು ೫೮ ಜನಗಳ ಮೇಲೆ ಅಲದೂರು ಪೋಲೀಸ್ ಠಾಣೆಯಲ್ಲಿ ಕಲಂ ೧೪೩, ೪೨೭, ೩೭೯ ರ ಪ್ರಕಾರ ಕ್ರಿಮಿನಲ್ ಮೊಕ್ಕದ್ದಮೆ ಹೂಡಿದ್ದು ನಂಬ್ರ್ ೬೫/೮೩ ರಂತೆ ಅಂದೇ ರಿಜಿಸ್ಟರ್ ಆಗಿರುತ್ತೆ. ಈ ಅಮೃತ ಶಿಲೆಯ ಕಲ್ಲಿನ ಬೆಲೆ ರೂ. ೫೦೦ ಆಗುವುದು.

ತಾರೀಖು ೧–೯–೮೩ ರಂದು ಸಹ ಬೆಳಿಗ್ಗೆ ೧೧ ಗಂಟೆಗೆ ನೂತನ ಉಗ್ರಾಣದ ರೋಲಿಂಗ್ ಷಟರ ಹಾಕಿದ್ದ ಬೀಗಗಳನ್ನು ಹೊಡೆದು ಉಗ್ರಾಣದಲ್ಲಿದ್ದ ಉದ್ಘಾಟನಾ ಸಮಾರಂಭದ ಅಮೃತ ಶಿಲೆಯನ್ನು ಹಾಗೂ ಆಡಳಿತ ಮಂಡಳಿಯ ಸದರ ಹೆಸರುಗಳನ್ನು ಕೆತ್ತಿದ್ದ ಅಮೃತ ಶಿಲೆಯ ಕಲ್ಲನ್ನು ಸುತ್ತಿಗೆಯಿಂದ ಒಡೆದು ಪುಡಿ ಪುಡಿ ಮಾಡಿರುತ್ತಾರೆ. ಸಂಘದಲ್ಲಿ ಹಾಕಿದ್ದ ೩ ಲೈಟ್‌ಗಳನ್ನು ಹಾಳು ಮಾಡಿರುತ್ತಾರೆ ಬಾಗಿಲಿಗೆ ಹಾಕಿದ್ದ ಕೈ ಹಿಡಿಕೆಯನ್ನು ಮತ್ತು ಸಂಘದ ನಾಮಫಲಕಗಳನ್ನು ಸಹ ಹಾಳುಮಾಡಿದ್ದಾರೆ, ಈ ವಿಚಾರದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಸಿ. ಹೆಚ್. ಲೋಕೇಶ್‌ಗೌಡ ಇವರು ೯೮ ಜನರ ಮೇಲೆ ಅಲದೂರು ಪೋಲೀಸ್ ಠಾಣೆಯಲ್ಲಿ ಕಲಂ ೧೪೩, ೪೪೨, ೧೪೯, ೪೨೭ ರ ಪ್ರಕಾರ ಮೊಕದ್ದಮೆ ಹೂಡಿದ್ದು ನಂಬರ್ ೯೨/೮೩ ರಂತೆ ರಿಜಿಸ್ಟರ್ ಆಗಿರುತ್ತೆ. ಈ ಪ್ರಕರಣದಲ್ಲಿ ಸಂಘಕ್ಕೆ ಒಟ್ಟು ರೂ. ೩,೯೫೦ ರಷ್ಟು ನಷ್ಟವುಂಟಾಗಿರುತ್ತೆ.

ಇದೇ ದಿನ ಅಂದರೆ ೧–೯–೮೩ರಂದು ಮಧ್ಯಾಹ್ನ ವೇಳೆಯಲ್ಲಿ ರೈತ ಸಂಘದವರೇ ಆದ ಕೆಲವು ಜನ ಸಂಘದ ಕಾರ್ಯದರ್ಶಿ ನಮ್ಮ ಪೇರು ಹಣ ವಾಪಸ್ ಕೊಡಿ ಎಂದು. ಇಲ್ಲದಿದ್ದರೆ ಬೆತ್ತಲೇ ಸೇವೆ ಮಾಡುತ್ತೇವೆಂದು ಹೆದರಿಸಿರುತ್ತಾರೆ. ಸಂಘದ ಲೆಕ್ಕಪತ್ರಗಳನ್ನು ಸಹ ಸುಟ್ಟು ಹಾಕುತ್ತೇವೆಂದು ಹೆದರಿಸಿರುತ್ತಾರೆ. ಈ ವಿಚಾರದಲ್ಲಿಯೂ ಸಹ ಸಂಘದ ಕಾರ್ಯದರ್ಶಿಯು ೨೮ ಜನರ ಮೇಲೆ ಅಲ್ಲದೂರು ಪೋಲೀಸ್ ಠಾಣೆಯಲ್ಲಿ ಮೊಕದ್ದೆಮೆ ಹೂಡಿರುತ್ತಾರೆ. ಕಲಂ ೧೪೩, ೧೪೨, ೧೪೯. ೪೪೭ ರಲ್ಲಿ ಈ ಮೊಕದ್ದಮೆಯು ನಂಬರ್ ೯೩/೮೩ರಂತೆ ರಿಜಿಸ್ಟರ್ ಆಗಿರುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಘಟನೆ ನಡೆದದ್ದು ಸರಿ ಎಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಇಲ್ಲಿ ಕೆಲವು ಮೂಲಭೂತವಾದ ಪ್ರಶ್ನೆಗಳು ಉದ್ಭವವಾಗುತ್ತವೆ. ಮೊದಲನೆಯದಾಗಿ ಈ ಒಂದು ಸಮಾರಂಭವನ್ನು ಮಾಜಿ ಶಾಸಕರಾದ ಶ್ರೀ ಸಿ. ಎ. ಚಂದ್ರೇಗೌಡರು ಉದ್ಘಾಟನೆ ಮಾಡಲು ಬಂದಾಗ ಉಗ್ರಾಣದಲ್ಲಿ ಶಂಕು ಸ್ಥಾಪನೆಗೆ ಹಾಕಿದ್ದ ಅಮೃತಶಿಲೆಯ ಕಲ್ಲನ್ನು ಕಿತ್ತು ರೈತ ಸಂಘದವರು ಸಂಘದ ಸಕ್ಕರೆ ಖಾಲಿ ಚೀಲದಲ್ಲಿ ಹಾಕಿಕೊಂಡು ಹೋಗಿರುತ್ತಾರೆಂದು ಇಲ್ಲಿ ಹೇಳಿದ್ದಾರೆ. ಇಲ್ಲಿ ರೈತ ಸಂಘವೇ ಸರ್ಕಾರ, ಸರ್ಕಾರವೇ ರೈತ ಸಂಘ ಎಂದು ಹೇಳಿಕೊಂಡು ಕೆಲವು ಗೂಂಡಾಗಳು ಈ ರೀತಿ ಪ್ರಾಡಿರಬೇಕಾದರೆ ಮತ್ತು ಅಲ್ಲಿ ವ್ಯಾನ್‌ಗಟ್ಟಲೆ ಪೋಲೀಸರಿದ್ದರೂ ಸಹ ಕ್ರಮ ತೆಗೆದುಕೊಳ್ಳದೆ ಮೂಕ ಪ್ರೇಕ್ಷಕರಂತೆ ಇದ್ದದನ್ನು ನೋಡಿದಾಗ ಸರ್ಕಾರ ಎಂಬುದು ಎಲ್ಲಿದೆ ಎಂದು ಕೇಳಬೇಕಾಗಿದೆ. ಈ ಎಲ್ಲಾ ಘಟನೆಗಳು ಮುಗಿದ ನಂತರ ಆ ಜನರನ್ನು ಸಂರಕ್ಷಣೆ ಮಾಡಬೇಕೆಂದುಕೊಂಡು ಅವರನ್ನೆಲ್ಲಾ ಪೋಲೀಸ್ ವ್ಯಾನ್‌ನಲ್ಲಿ ಹಾಕಿಕೊಂಡು ಹೋಗಿದ್ದಾರೆ. ಅವರು ಅಮೃತಶಿಲೆಯ ಕಲ್ಲನ್ನು ಒಡೆದು ಪುಡಿ ಪುಡಿ ಮಾಡಿದ ಮೇಲೆ ಮತ್ತು ಗಲಾಟೆ ಹಾಗೂ ಗೊಂದಲ ಮಾಡಿದ ನಂತರ ಕರೆದುಕೊಂಡು ಹೋಗಿ ಕೆಲಸ್ ಹಾಕಿದ್ದಾರೆ. ಈ ಕ್ರಮ ಸರಿಯೇ?

ಈ ರೀತಿ ಆದರೆ ನೀವು ಜನರಿಗೆ ಯಾವ ರೀತಿ ರಕ್ಷಣೆ ಕೊಡುತ್ತೀರಿ? ಮಂತ್ರಿಗಳಿಗಾದರೆ ರಕ್ಷಣೆ ಗೆಂದು ಪೋಲೀಸರು ಇರುತ್ತಾರೆ. ಆದರೆ ಸಾರ್ವಜನಿಕ ಮುಖಂಡರು ಯಾರು ಇರುತ್ತಾರೆ. ಅವರಿಗೆ ರಕ್ಷಣೆ ಬೇಡವೇ? ಒಂದು ವೇಳೆ ಕಾಂಗ್ರೆಸ್(ಐ)ಗೆ ಸೇರಿದ ನಾಯಕರು ಸಮಾರಂಭ ನಡೆಸ ಬಾರದೆಂದು ಸರ್ಕಾರದಿಂದ ಗುಪ್ತ ಆದೇಶ ಏನಾದರೂ ಹೋಗಿದೆಯೇ? ಇಲ್ಲದಿದ್ದರೆ ಪೋಲೀಸರು ಏತಕ್ಕೆ ಮೂಕಪ್ರೇಕ್ಷಕರಂತೆ ಗಲಾಟೆ ನಡೆಯುವಾಗ ನಿಂತಿದ್ದರು? ಇದನ್ನು ನೋಡಿದಾಗ ಸರ್ಕಾರ ಬಳೆತೊಟ್ಟು ನಿಂತಿರಬೇಕೆಂದು ಕಾಣುತ್ತದೆ ಆಲ್ಲಿ ಗೂಂಡಾಗಿರಿ ನಡೆಯುತ್ತಿದಾಗಲ್ಲೂ ಕೂಡ ಪೋಲೀಸರು ನಿರ್ಲಕ್ಷ್ಯದಿಂದ ಹಾಗೂ ಉದಾಸೀನತೆಯಿಂದ ಇದ್ದದ್ದನ್ನು ನೋಡಿದರೆ ಸರ್ಕಾರವೇ ಪೋಲೀಸರಿಗೆ ಪ್ರೋತ್ಸಾಹ ಕೊಟ್ಟಂತೆ ಆಗಲಿಲ್ಲವೇ? ಇದನ್ನು ತಾವು ಯಾವ ರೀತಿ ಜೆಸ್ಟಿಫೈ ಮಾಡುತ್ತೀರಿ? ಇಂತಹ ಘಟನೆಗಳು ನಡೆದರೆ ಸಹಕಾರ ಸಂಘಗಳು ಯಾವ ರೀತಿ ಕೆಲಸ ಮಾಡಬೇಕು? ಇದನ್ನೆಲ್ಲಾ ತಾವು ವಿತರಣೆ ಕೊಡಬೇಕು. ಜನತಾ ಪಕ್ಷದ ಸರ್ಕಾರದಲ್ಲಿ ಕಾಂಗ್ರೆಸ್(ಐ) ನಾಯಕರುಗಳು ಯಾವುದೇ ಸಮಾರಂಭದಲ್ಲಿ ಭಾಗವಹಿಸಬಾರದೆಂದು ತಮ್ಮ ನೀತಿ ಏನಾದರೂ ಇದೆಯೇ? ಇಲ್ಲದಿದ್ದರೆ ತಪ್ಪು ಮಾಡಿದ ಪೋಲೀಸ್ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ಒಂದು ಘಟನೆಯ ಹಿನ್ನೆಲೆಯಲ್ಲಿ ತಾವು ರೈತ ಸಂಘದ್ದೇ ಸರ್ಕಾರ, ಸರ್ಕಾರವೇ ರೈತ ಸಂಘ ಎಂದು ಏನಾದರೂ ತಿರ್ಮಾನ ಮಾಡಿದ್ದೀರಾ? ಜನರಿಗೆ ಅಧಿಕಾರ ಎಂದುಕೊಂಡು ಈ ಗೂಂಡಾ ಗಳಿಗೆ ತಾವು ಅಧಿಕಾರ ಕೊಟ್ಟಿದ್ದೀರಾ? ಇದನ್ನು ಬಿಟ್ಟು ಜನರನ್ನು ಸಂರಕ್ಷಣೆ ಮಾಡುವುದು ತಮ್ಮ ನೀತಿ ಆಗಿದೆಯೇ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಈ ಘಟನೆ ನಡೆದ ಬಗ್ಗೆ ಮಾನ್ಯ ವೀರಪ್ಪ ಮೊಯ್ಲಿ ಅವರಿಗೆ ಎಷ್ಟು ಸಂಕಟವಾಗಿದೆಯೋ ಅಷ್ಟೆ ನಮಗೂ ಸಂಕಟವಾಗಿದೆ. ಕೆಲವು ರೈತ ಮುಖಂಡರು ಸರ್ಕಾರವೆಂದರೆ ನಾವೇ ಎಂದು ತಿಳಿದುಕೊಂಡಿದ್ದಾರೆ. ಆದನ್ನು ನಾನು ಒಪ್ಪುತ್ತೇನೆ. ಈಗಾಗಲೇ ತಮ್ಮಗೆ ಗೊತ್ತಿರುವಂತೆ ಈ ಬಗ್ಗೆ ನಾವು ಒಂದು ತಿಂಗಳಿಂದ ಬಿಗಿಯಾದ ನೀತಿ ಯನ್ನು ತಳೆದಿದ್ದೇವೆ. ರೈತರ ಬಗ್ಗೆ, ನಮ್ಮ ವಿರೋಧವೇನೂ ಇಲ್ಲ. ಆದರೆ ರೈತರ ಹೆಸರಿನಲ್ಲಿ ರೈತ ಸಂಘದ ಕೆಲವು ಮುಖಂಡರುಗಳು ಈ ತರಹ ದೊಂಬಿ ನಡೆಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇಂತಹವರ ಬಗ್ಗೆ ತೀವ್ರವಾದಂಥ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರದವರು ಕಾರ್ಯ ನಿರಂತರವಾಗಿದ್ದಾರೆ. ಶ್ರೀ ಸಿ.ಎ. ಚಂದ್ರೇಗೌಡರು ಕಾಂಗ್ರೆಸ್(ಐ)ನವರಾದ ಕಾರಣ ಈ ತರಹ ಮಾತಿ ಎಂದು ಯಾವ ಬುದ್ಧಿವಂತ ಸರ್ಕಾರವೂ ಹೇಳುವುದಿಲ್ಲ ಸಹಕಾರ ರಂಗದಲ್ಲಿ ಪಕ್ಷ ಬೇಧ ಇರಬಾರದೆಂಬುದನ್ನು ನಾನು ಒಪ್ಪುತ್ತೇನೆ. ಮಾನ್ಯ ವೀರಪ್ಪ ಮೊಯ್ಲಿ ಅವರೂ ಸಹ ಒಪ್ಪುತ್ತಾರೆ. ಶ್ರೀ ಸಿ.ಎ ಚಂದ್ರೇಗೌಡರು ನಿಮಗೆ ಯಾವ ರೀತಿ ಸ್ನೇಹಿತರೋ ನನಗೂ ಸಹ ಅಷ್ಟೇ ಸ್ನೇಹಿತ ರಾಗಿದ್ದಾರೆ. ಅವರ ನಮ್ಮ ಪಕ್ಷಗಳು ಬೇರೆ ಇರಬಹುದು. ಆದರೆ ನಾವು ಅವರು ಸ್ನೇಹಿತರಾಗಿಯೇ ಇದ್ದೇವೆ, ಆದ್ದರಿಂದ ನಾವು ಯಾರಿಗೂ ಯಾವ ತರಹದ ಡೈರೆಕ್ಷನ್ ಕೊಟ್ಟಿಲ್ಲ, ಬೇರೆ ಪಕ್ಷ ದವರು ಕರೆಸಿಕೊಂಡು ಸಭೆ ನಡೆಸಬಾರದೆಂದು ನಾವು ಯಾರಿಗೂ ಹೇಳಿಲ್ಲ, ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರುವುದೇನೆಂದರೆ ನಿಮ್ಮ ಜಿಲ್ಲೆಯಲ್ಲಿ ನಾನು ನಿಮ್ಮ ಶಾಸಕರ ಜೊತೆಯಲ್ಲೇ ಕುಳಿತು ಮಾತನಾಡಿದ್ದೇನೆ. ನಾನು ಪ್ರವಾಸ ಹೋಗುವಾಗ ಅವರನ್ನು ನನ್ನ ಕಾರಿನಲ್ಲಿ ಕರೆದು ಕೊಂಡು ಹೋಗಿದ್ದೇನೆ. ಬಳ್ಳಾರಿ ಜಿಲ್ಲೆಯಲ್ಲಿ ತಮ್ಮ ಶಾಸಕರ ಜೊತೆಯಲ್ಲೇ ಕೆಲಸಕಾರ್ಯಗಳನ್ನು ಮಾಡಿಕೊಂಡು ಬಂದಿದ್ದೇನೆ. ಇದು ಸರ್ಕಾರದ ಕೆಲಸ, ಪಕ್ಷದ ಕೆಲಸವಲ್ಲ. ಇಂತಹ ಒಂದು ಅನುಮಾನ ಪಡುವುದು ಬೇಡ. ನಡೆದಿರುವದು ದುರ್ಘಟನೆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಜಿ. ತಿಪ್ಪಯ್ಯ.—ನಾನು ಆ ಕ್ಷೇತ್ರದ ಶಾಸಕನಿದ್ದೇನೆ. ನನಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಮಾತನಾಡಬೇಕಾದರೆ ನೋಟೀಸ್ ಕಳುಹಿಸಬೇಕು.

ಶ್ರೀ ವಿ. ವೀರಪ್ಪ ಮೊಯ್ಲಿ.—ನಾನು ಪೋಲೀಸರ ವರ್ತನೆಯ ಬಗ್ಗೆ ನೇರವಾಗಿ ಆಕ್ಷೇಪಣೆ ಎತ್ತಿದ್ದೇನೆ. ಘಟನೆ ನಡೆದಮೇಲೆ ೨—೩ ವ್ಯಾನ್‌ಗಳಲ್ಲಿ ಪೋಲೀಸಿನವರು ಹೋಗಿದ್ದರೂ ಸಹ ಅವರು ಪ್ರಿವಿಂಟೀವ್ ಆ್ಯಕ್ಷನ್ ತೆಗೆದುಕೊಂಡಿಲ್ಲ. ಪೋಲೀಸ್ ಅಧಿಕಾರಿಗಳು ಏತಕ್ಕೆ ರಕ್ಷಣೆ

ಕೊಡಲಿಲ್ಲ. ಪೋಲೀಸರ ವರ್ತನೆಯ ಬಗ್ಗೆ ತಾವು ವಿಚಾರ ಮಾಡುತ್ತಿರಾ ? ರೈತಸಂಘದವರೆಂದು ಸೋಗು ಹಾಕಿಕೊಂಡು, ಕಾರ್ಯಕ್ರಮಗಳನ್ನು ಹಾಕಿಕೊಂಡು ಹಳ್ಳಿಗಳಲ್ಲಿ ಬೆತ್ತಲೆ ಮೆರವಣಿಗೆ ಮಾಡುತ್ತಿದ್ದಾರೆ, ಆ ರೀತಿ ಮಾಡುವುದರಿಂದ ಕರ್ನಾಟಕ ರಾಜ್ಯದಲ್ಲಿ ಅನೇಕ ಸೊಸೈಟಿಗಳು ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತಿದೆ. ಅನೇಕಲ್‌ನಲ್ಲಿ ಇದೇ ಪ್ರಸಂಗ ನಡೆದಿದೆ. ಸೊಸೈಟಿಗಳಲ್ಲಿ ಕೆಲಸ ಮಾಡುವುದಕ್ಕೆ ಅಡ್ಡಿಪಡಿಸಿ, ಗೂಂಡಾ ಪ್ರವೃತ್ತಿ ಮಾಡುವವರನ್ನು ತಡೆಹಿಡಿದು, ಅಂಥವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ತಾವು ವಿಷಕ್ಕೆ ಪ್ರಶ್ನೆ ಮಾಡುತ್ತಿದ್ದೀರಿ ತಾವು ನೋಟೀಸ್‌ಗೆ ಸಹಿ ಹಾಕ್ಕಿಲ್ಲ.

ಶ್ರೀ ಧರ್ಮಸಿಂಗ್.—ರೈತ ಮುಖಂಡರು ಗಲಾಟೆ ಮಾಡಿದ್ದಾರೆಂದು ಹೇಳಿದರು.

ಶ್ರೀ ಪಿ. ತಿಪ್ಪಯ್ಯ.—ನಾನು ಆ ಕ್ಷೇತ್ರದ ಶಾಸಕ, ನಾನು ಪ್ರಶ್ನೆ ಮಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಈ ರೀತಿ ಧ್ವನಿ ಎತ್ತಿದರೆ ಕೆಲಸವಾಗುವುದಿಲ್ಲ, ತಾವು ನೋಟೀಸ್ ಕೊಡಬೇಕು.

ಶ್ರೀ ಬಿ. ಸ್ವಾಮಿರಾವ್.—ನನ್ನದು ಕ್ರಿಯಾಲೋಪವಿದೆ. ರುಜು ಹಾಕಿಸವರು ಪ್ರಶ್ನೆ ಮಾತನಾಡಬೇಕೆಂದರೆ ಹೇಗೆ ? ನಿಯಮ ೫೫ಳಿರ ಕೆಳಗಡೆ ಮಾತನಾಡುವಾಗ ರುಜು ಹಾಕದಿದ್ದರೂ ಪ್ರಶ್ನೆ ಮಾತನಾಡಬಹುದೆಂದು ತಾವು ಆಜ್ಞೆ ಮಾಡಿದ್ದೀರಿ, ಈಗ ಸಹಿ ಮಾಡದೆ ಮಾತನಾಡುವ ಹಾಗೆ ಇಲ್ಲವೆಂದು ಹೇಳುತ್ತೀರಿ. ಇದರ ಬಗ್ಗೆ ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ತಮಗೆ ಹೇಳಿದ್ದೇನೆ. You have raised a Very right and correct point of order. But under special circumstances the concerned. M.L.A. wanted to Say Something. I have allowed him.

ಶ್ರೀ ಪಿ. ತಿಪ್ಪಯ್ಯ.—ಆಲಂದೂರು ಸಮಸ್ಯೆಯ ಬಗ್ಗೆ ಅನಾವಶ್ಯಕವಾಗಿ ರಾಜಕೀಯವನ್ನು ಪ್ರಶ್ನೆ ಮಾಡುತ್ತಿದ್ದಾರೆ. ಮಾಜಿ ಶಾಸಕರಾದ ಸಿ.ಎ. ಚಂದ್ರೇಗೌಡರು ಮತ್ತು ಈ ಕಡೆಯವರು ಒಟ್ಟಿಗೆ ಸೇರಿಕೊಂಡು ಪಕ್ಷಭೇದವನ್ನು ಮರೆತು Cooperation ನಿಂದ ಕೆಲಸ ಮಾಡುತ್ತಿದ್ದಾರೆ. ಇದನ್ನು ಮಾನ್ಯ ವಿರೋಧಪಕ್ಷದ ನಾಯಕರು ಅರ್ಥಮಾಡಿಕೊಳ್ಳಬೇಕು. ಅಲ್ಲಿ ಅಂತಹದ್ದೇನೂ ಆಗಿಲ್ಲ, ಪೋಲೀಸಿನವರು ಕ್ರಮ ತೆಗೆದುಕೊಂಡಿದ್ದಾರೆ. ಇದರಲ್ಲಿ ರಾಜಕೀಯವೇನು ಇಲ್ಲ ಅಲ್ಲಿ ಎಲ್ಲರೂ ಸಹಕಾರದಿಂದ ಉತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ, ಅಲ್ಲಿ ನಡೆದಿರತಕ್ಕ ಘಟನೆಯ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಪ್ರಶ್ನೆ ವಿರೋಧಪಕ್ಷದ ನಾಯಕರು ಅಲ್ಲಿ ಪೋಲೀಸ್‌ನವರು ಇದ್ದರು. ಅವರು ಅಲ್ಲಿದ್ದರೂ ಕೂಡ ನಿಷ್ಕ್ರಿಯರಾಗಿದ್ದರು ಎಂದು ಹೇಳಿದ್ದಾರೆ. ಆ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ ನಾನು ಮಾಹಿತಿಯನ್ನು ತರಿಸಿಕೊಂಡು ಅದು ನಿಜವಾಗಿದ್ದ ಪಕ್ಷದಲ್ಲಿ ಪ್ರಶ್ನೆ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಎರಡನೆಯದಾಗಿ ಯಾರೇ ಆಗಲಿ ಗಲಾಟೆ ಮಾಡುವುದರಿಂದ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಅದು ನಿಜ. ಶಿವಮೊಗ್ಗ, ಹಾಸನ ಮತ್ತು ಮಂಡ್ಯ ಜಿಲ್ಲೆಗಳ ಕೆಲವು ಭಾಗಗಳಲ್ಲಿ ರೈತ ಮುಖಂಡರು ಗಲಾಟೆ ಮಾಡುವುದರಿಂದ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಸರ್ಕಾರ ಸೂಕ್ತಕ್ರಮ ತೆಗೆದುಕೊಳ್ಳುತ್ತದೆಂದು ಹೇಳುತ್ತೇನೆ.

Dissecussion on White paper on the office of the Governor

ಶ್ರೀ ಎಂ. ವೀರಪ್ಪಮೊಯಿಲಿ.—(ವಿರೋಧ ಪಕ್ಷದ ನಾಯಕರು) ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಅವರ ಇಲಾಖೆಗಳ ಬೇಡಿಕೆಯ ಮೇಲೆ ನಿನ್ನ ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಟ್ಟಂತಹ ಸಮಯದಲ್ಲಿ ನಾವು ಏನನ್ನು ಕಂಡಿದ್ದೇವೆ ಅಂದರೆ. ಅದು ಕೂಡ ಇವತ್ತು ಪತ್ರಿಕೆಯಲ್ಲಿ.